# ಸತ್ಯ : ಗಾಂಧೀಜಿಯ ದೇವರು

ಡಾ. ಹೆಚ್. ರಾಮಚಂದ್ರಸ್ವಾಮಿ



ಸತ್ಯವನ್ನು ದೇವರೊಂದಿಗೆ ಸಮೀಕರಿಸುವುದರ ಮೂಲಕ ದೇವರು ನಮಗೆ ಅತ್ಯಂತ ಸಮೀಪವರ್ತಿಯಾಗುವಂತೆ ಮಾಡಿರುವರು ಮಹಾತ್ಮಾ ಗಾಂಧೀಜಿಯವರು. ಅವರ ಸತ್ಯದ ಕಲ್ಪನೆಯ ಒಂದು ವಿಶ್ಲೇಷಣಾತ್ಮಕ ಲೇಖನವಿದು. ಶೃಂಗೇರಿಯ ಜೆ.ಸಿ.ಬಿ.ಎಂ. ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾಗಿರುವ ಶ್ರೀ ರಾಮಚಂದ್ರ ಸ್ವಾಮಿಯವರು ಬ್ರಿಟಿಷ್ ಇಕಾಲಾಜಿಕಲ್ ಸೊಸೈಟಿಯ ಗೌರವ ಸದಸ್ಯರಾಗಿರುವರು.

### ಸತ್ಯವೇ ಸರ್ವ ಮೂಲಾಧಾರ

**ತಮ್ಮ** ದೀರ್ಘವಾದ ಬಿಡುವಿಲ್ಲದ ಜೀವನದಲ್ಲಿ ಗಾಂಧೀಜಿ ಬೇಕಾದಷ್ಟು ಬರೆದರು, ಭಾಷಣಗಳನ್ನೂ ಮಾಡಿದರು. ಗಾಂಧೀಜಿಯ ಇಡೀ ಜೀವನತತ್ತ್ವದ ಸಾರಾಂಶವನ್ನು ಸತ್ಯ ಎಂಬ ಒಂದೇ ಒಂದು ಪದದಲ್ಲಿ ಸಂಗ್ರಹಿಸಿಬಿಡಬಹುದು. ಅವರು ಯಾವ ಯಾವುದನ್ನು ನೆಮ್ಮಿ ನಡೆದರೋ, ಯಾವ ಯಾವುದನ್ನು ನಂಬಿ ಅನುಷ್ಠಾನಕ್ಕೆ ತಂದರೋ, ಯಾವುದನ್ನು ಸಮರ್ಥಿಸಿ ಬೇರೆಯವರಿಗೂ ಬೋಧಿಸಿದರೋ, ಅವುಗಳೆಲ್ಲಕ್ಕೂ ಮೂಲ ಆಧಾರವೇ ಈ 'ಸತ್ಯ'. ಸತ್ಯದ ಜೊತೆ ಪ್ರತಿಕ್ಷಣವೂ ಬದುಕುವುದಾದರೆ, ಆ ಬದುಕು 'ಅಹಿಂಸೆ'ಯಿಂದ ಸಹಜವಾಗಿಯೇ ತುಂಬಿರುತ್ತದೆ ಎಂದು ಅವರ ನಂಬಿಕೆ. ಗಾಂಧೀಜಿಯವರಿಂದಲೇ ರೂಢಿಗೆ ತರಲ್ಪಟ್ಟ 'ಸತ್ಯಾಗ್ರಹ' ವೆಂಬುದೂ ಸಹ ಇತರರನ್ನು ಸತ್ಯದಲ್ಲಿ ನೆಲೆಗೊಳಿಸುವುದಕ್ಕಾಗಿಯೇ ಹೂಡಿದ ಒತ್ತಡ ತಂತ್ರ ಅಥವಾ ಒತ್ತಾಯ ವಿಧಾನ. ಸತ್ಯವನ್ನೇ ದೇವರೆಂದವರು ಗಾಂಧೀಜಿ—ಎಂದಮೇಲೆ ಅವರ ಬದುಕಿನ ಮೂಲಮಂತ್ರವೇ ಸತ್ಯವೆಂಬುದರಲ್ಲಿ ಸಂದೇಹವಿಲ್ಲ. ತಾವು ಬರೆದ ತಮ್ಮ ಆತ್ಮಚರಿತ್ರೆಗೆ ಅವರಿಟ್ಟ ಹೆಸರು 'ಸತ್ಯದೊಂದಿಗೆ ನನ್ನ ಪ್ರಯೋಗಗಳು.'

### ಸತ್ಯವಚನ

ಯಾವುದೇ ಮಾನವ ಜನಾಂಗದಲ್ಲಿ, ಮಕ್ಕಳಿಗೆ ಹಿರಿಯರು ಬೋಧಿಸುವ ಮೊಟ್ಟಮೊದಲ ನೀತಿಯೇ 'ಸತ್ಯವನ್ನು ನುಡಿ' ಎಂಬುದು. ಮಾಫಿಯಾ ಸಮಾಜದಲ್ಲಿ ಸಹ ಹೊಸದಾಗಿ ಸೇರ್ಪಡೆಯಾದವನು ಗುಂಪಿನಲ್ಲಿ ಸ್ವೀಕೃತನಾಗಬೇಕಾದರೆ ಅಗತ್ಯವಾದದ್ದು ಈ 'ಸತ್ಯ'ವೇ. ಗಾಂಧೀಜಿಗೂ ಮಗುವಾಗಿದ್ದಾಗ ಸಾಂಪ್ರದಾಯಿಕವಾಗಿ 'ಸತ್ಯವನ್ನೇ' ನುಡಿಯುವಂತೆ ಅವರ ಹಿರಿಯರು ಬೋಧಿಸಿದರು. ಆ ಬೋಧನೆ ಅಂದಿನ ಎಲ್ಲ ಮೂವತ್ತಮೂರು ಕೋಟಿ ಭಾರತೀಯ ಶಿಶುಗಳಿಗೂ ದೊರೆತಿದ್ದರೂ ಸಹ ಅದು ಗಾಂಧೀಜಿಯವರ ಮನಸ್ಸಿನಲ್ಲಿ ಕಿತ್ತು ಬಿಸುಡಲಾರದಷ್ಟು ಬಲವಾಗಿ ಬೇರು ಬಿಟ್ಟು ಕ್ರಮೇಣ ಹೆಮ್ಮರವಾಗಿ ಬೆಳೆದದ್ದು ಲೋಕದ ಪುಣ್ಯ ಎನ್ನಬಹುದು.

ಬಾಲಕ ಗಾಂಧೀ ಬೆಳೆಯುತ್ತಿದ್ದಂತೆ ಯಾವಾಗಲಾದರೂ ಚಿಂತಿಸಿರಬಹುದು : 'ಸತ್ಯವನ್ನು ಏಕೆ ನುಡಿಯಬೇಕು?' ಹಿರಿಯರನ್ನು ಕೇಳಿದ್ದರೆ ಅವರೇನು ಉತ್ತರ ಕೊಟ್ಟಿರಬಹುದು? ವ್ಯಕ್ತಿಗೂ ಸಮಾಜಕ್ಕೂ ಅದು 'ಹಿತ'ಕರವೆಂದಿರಬಹುದು ; ಸತ್ಯ 'ಒಳ್ಳೆಯದು' ಎಂಬ ನಂಬಿಕೆ ತಲತಲಾಂತರದಿಂದ ಬಂದದ್ದು ಎಂದಿರಬಹುದು; ಸತ್ಯವನ್ನು ನುಡಿಯದಿದ್ದರೆ ಸಮಾಜ ಮುರಿದು ಬೀಳುವುದೆಂದೂ ವ್ಯಕ್ತಿ ನಾಶವಾಗುವನೆಂದೂ ಹೆದರಿಸಿರಬಹುದು. ವ್ಯಕ್ತಿಗೋ ಸಮಾಜಕ್ಕೋ 'ಉಪಯುಕ್ತ' ಎಂಬ ಸಮರ್ಥನೆ ಬಲವಾಗಿ ನಿಲ್ಲುವುದಿಲ್ಲ; ಏಕೆಂದರೆ 'ಉಪಯುಕ್ತ' ವಾಗಬಹುದಾದ ಸಂದರ್ಭಗಳಲ್ಲಿ ಹೇಳಬಹುದಾದ ಸುಳ್ಳಿಗೂ ಅದೇ ಸಮರ್ಥನೆಯನ್ನು ಬಳಸಬಹುದು. ನಿರಪಾಯಕರವಾದ ಸುಳ್ಳು ಸಾಮಾಜಿಕವಾಗಿ ಅಪೇಕ್ಷಿತವೂ ಹೌದು. ಯಾರಾದರೂ ಸತ್ತಾಗ ಸತ್ತವನ ಸದ್ಗುಣಗಳನ್ನು ಅವು ಇದ್ದಿರಬೇಕೆಂಬ ಗುಮಾನಿಯ ಮೇಲೆ ಕಲ್ಪಿಸಿಕೊಂಡು ಶ್ರದ್ಧಾಂಜಲಿ ಸಲ್ಲಿಸುತ್ತೇವೆಯೇ ಹೊರತು ಸತ್ಯದ ಹೆಸರಿನಲ್ಲಿ ಅವನು ಕೆಟ್ಟವನಾಗಿದ್ದನೆಂದು ಹೇಳುವುದಿಲ್ಲ. ಈ ತರಹದ ಸುಳ್ಳುಗಳು ಸಾಮಾಜಿಕ ಸಭ್ಯತೆ ಎನ್ನಿಸಿಕೊಳ್ಳುತ್ತವೆ, ಸಮಾಜದಲ್ಲಿ ಬದುಕುವುದಕ್ಕಾಗಿ ಇಂಥವುಗಳನ್ನು ಹೇಳಲೂ ಬೇಕಾಗುತ್ತದೆ, ಸಹಿಸಲೂ ಬೇಕಾಗುತ್ತದೆ. 'ಸಂತ' ನಿಗಾದರೋ ಇಂಥ ಸಮಾಧಾನ, ಹೊಂದಾಣಿಕೆ ಸಲ್ಲದು; ಅವನು ನುಡಿಯುವುದೇ ಆದಲ್ಲಿ ಸತ್ಯವನ್ನೇ ನುಡಿಯಬೇಕು; ಸತ್ಯ ಅವನ ಪಾಲಿಗಂತೂ ಕೇವಲ ಸತ್ಯವೇ ಆಗಿರಬೇಕಲ್ಲದೆ ಸತ್ಯವೆಂಬ ಪದವಾಗಿ ಬಿಡಬಾರದು.

### ಸತ್ಯವೇ ದೇವರು

ಸತ್ಯವೇ ಪ್ರಥಮ ಹಾಗೂ ಪರಮ ಆಗುವುದು ಹೇಗೆ? ಶಾಸ್ತ್ರಗಳದ್ದೋ ದೇವರದ್ದೋ ಆದೇಶ ಎಂಬುದು ಅಷ್ಟು ಸರಿಯಾಗದು; ಏಕೆಂದರೆ ಎಲ್ಲವನ್ನೂ ಹೇಳಿಯಾದಮೇಲೆ **'ಯಥೇಚ್ಛಸಿ ತಥಾ ಕುರು'** ಎಂತಲೂ ಅದೇ ದೇವರು ಹೇಳಿದ್ದಾನೆ. ಮೇಲಾಗಿ, ಸಾಧಕನಾಗಹೊರಡುವವನಿಗೆ ಶಾಸ್ತ್ರಗಳ, ದೇವರ, ಗುರು

> **ಸತ್ಯಕ್ಕಾಗಿ ಎಲ್ಲವನ್ನೂ ತ್ಯಾಗಮಾಡಬಹುದು. ಆದರೆ ಸತ್ಯವನ್ನು ಯಾವುದಕ್ಕಾಗಿಯೂ ತ್ಯಾಗ ಮಾಡುವಂತಿಲ್ಲ.**
>
> — ಸ್ವಾಮಿ ವಿವೇಕಾನಂದ

ಹಿರಿಯರ ಆಣತಿ, ಆಶ್ರಯಗಳ ಬಲವಾದರೂ ಎಲ್ಲಿಯವರೆಗೆ? ಬಾಹ್ಯ ಕಾರಣಗಳಿಗಾಗಿಯಲ್ಲದೆ ಸ್ವಂತ ಜವಾಬ್ದಾರಿಯ ಮೇಲೆ ಸ್ವೀಕರಿಸಿದರೆ ಮಾತ್ರ ಸತ್ಯ ನಮ್ಮದಾಗಬಹುದು. 'ಸತ್ಯವೇ ದೇವರು' ಎಂದು ಸ್ವೀಕರಿಸಿದಾಗ ಮಾತ್ರ ಸತ್ಯವನ್ನು ನೆಮ್ಮಿಕೊಳ್ಳುವುದೂ ಅನುಸರಿಸುವುದೂ ಹೇಳುವುದೂ (ಸತ್ಯಂ ವದ) ಸಹಜ, ಅಹೈತುಕ, ಅನುಷ್ಠಾನವಾಗುವುದೂ ಸಾಧ್ಯ. ಗಾಂಧೀಜಿ ಹೀಗೆ ಸತ್ಯವನ್ನು ಸತ್ಯಾತ್ ಸತ್ಯವಾಗಿ, ಆತ್ಮಪೂರ್ವಕವಾಗಿ ಸ್ವೀಕರಿಸಿ ತಮ್ಮದಾಗಿಸಿ ಕೊಂಡಿದ್ದರು.

### ಒಟ್ಟು ಸತ್ಯಗಳ ಸಮಷ್ಟಿರೂಪವೇ ದೇವರು

ಹಿಂದೂ ಧರ್ಮದಲ್ಲಿ ಹುಟ್ಟಿದ ಗಾಂಧೀಜಿ ದೇವರನ್ನು ಕೇವಲ ದೃಷ್ಟಿಯಿಂದ ನೋಡುತ್ತಿದ್ದುದು ಮಾತ್ರವಲ್ಲದೆ ಸಗುಣಬ್ರಹ್ಮನನ್ನೂ ಸ್ವೀಕರಿಸಬಲ್ಲವರಾಗಿದ್ದರು. ಆದರೆ ಅವರ ಬರಹಗಳಲ್ಲಿ ಸತ್ಯವೇ ದೇವರೆಂಬ ದೃಢ ನಿಲುವೇ ಎಲ್ಲೆಲ್ಲೂ ಕಂಡುಬರುತ್ತದೆ. 'ದೇವರನ್ನು ಪ್ರೇಮವೆನ್ನುವವರೊಟ್ಟಿಗೆ ನಾನೂ ದೇವರನ್ನು ಪ್ರೇಮವೆನ್ನುತ್ತೇನೆ; ಆದರೆ ಅಂತರ್ಯದಲ್ಲಿ ನನಗೆ ದೇವರು ಪ್ರೇಮವಾಗಿರುವುದಕ್ಕಿಂತ ಸತ್ಯವಾಗಿದ್ದಾನೆ ಅನ್ನಿಸುತ್ತದೆ. ಮನುಷ್ಯನ ನಾಲಿಗೆಗೆ ದೇವರನ್ನು ವರ್ಣಿಸುವುದು ಸಾಧ್ಯವೆಂದಾದರೆ, ಅದು ಈ 'ಸತ್ಯ'ವೆಂಬ ಪದದ ಮೂಲಕ. ಇತ್ತೀಚೆಗೆ 'ದೇವರು ಸತ್ಯ'ವೆಂಬುದನ್ನು ನಾನು 'ಸತ್ಯವೇ ದೇವರು' ಎಂದು ಬದಲಾಯಿಸಿಕೊಂಡಿದ್ದೇನೆ.' (*All Men are Brothers*, UNESCO, 1958).

ದೇವರನ್ನು ಸತ್ಯವೆನ್ನುವುದಾದರೆ ಅವನ ಒಂದು ಗುಣವನ್ನು ಹೇಳಿದಂತಾಯಿತು; ಸತ್ಯದ ಹಾಗೆಯೇ ಪ್ರೇಮ ಇತ್ಯಾದಿ ಇತರ ಗುಣಗಳಿಂದಲೂ ದೇವರನ್ನು ವರ್ಣಿಸಬಹುದು. ಆದರೆ ಸತ್ಯವೇ ದೇವರು ಎಂದರೆ ಸತ್ಯವು ದೇವರ ಭಾಗಶಃ ವರ್ಣನೆಯಾಗದೆ, ದೇವರೊಂದಿಗೆ ಸಂಪೂರ್ಣ ಐಕ್ಯವನ್ನೂ ಅನನ್ಯತೆಯನ್ನೂ ಹೇಳಿದಂತಾಗುತ್ತದೆ, ದೇವರ ವಿವರಣೆಯಾಗದೆ ದೇವರೆಂಬುದರ ಸಾರಾಂಶವಾಗುತ್ತದೆ. ಇದು ಕೇವಲ ಭಾವುಕ ಅಭಿವ್ಯಕ್ತಿಯಾಗಿರಲಿಲ್ಲ ಗಾಂಧೀಜಿಗೆ. ದೇವರನ್ನು ಸತ್ಯವೆಂದಾಗ, ಸತ್ಯವಾದ ಯಾವ ಅಭಿವ್ಯಕ್ತಿಯಾಗಲೀ ದೇವರನ್ನು ಸೂಚಿಸಬಹುದು. ಎಂದರೆ ಲಭ್ಯವಿರುವ ಸ್ವತಸ್ಸಿದ್ಧ ಪ್ರಮಾಣಗಳು ಅಥವಾ ವಿಶ್ವಕಾರಣವಾದ ನಿಯಮಗಳಿಂದ ವ್ಯುತ್ಪನ್ನವಾದ ಯಾವುದೇ ಸತ್ಯ ಅಭಿವ್ಯಕ್ತಿಯೂ ದೇವರನ್ನು ಸೂಚಿಸಬಹುದು. ಎಂದರೆ ಈಗ ನಮಗೆ ಗೊತ್ತಿರುವ, ಮುಂದೆ ಗೊತ್ತಾಗಬಹುದಾದ, ಪ್ರಾಕೃತಿಕ, ನೈತಿಕ, ಸಂವೇದನಾತ್ಮಕ ಇತ್ಯಾದಿಯಾದ ಎಲ್ಲ ಸ್ವತಸ್ಸಿದ್ಧ ವಿಶ್ವನಿಯಮಗಳ ಸಮುಚ್ಚಯ ದೇವರೆಂದಾಗುವುದು. ಅಂಥ ಪ್ರಮಾಣಗಳ ಪಟ್ಟಿಯೊಂದನ್ನು ಕೂಲಂಕಷವಾಗಿ ಸಿದ್ಧಪಡಿಸಿಬಿಟ್ಟರೆ ದೇವರನ್ನು ತಿಳಿದಂತಾಗುವುದು, ಅಭಿವ್ಯಕ್ತಿಸಿದಂತೆಯೂ ಆಗುವುದು!

### ಸತ್ಯವೇ ದೇವರ ಸರ್ವಶ್ರೇಷ್ಠ ಹೆಸರು

ಸತ್ಯದ ಇನ್ನೊಂದು ರೂಪವೂ ಇದೆ—ಅದನ್ನು ಪ್ಲೆಟೋನಿಕ್ ಎಂದು ಬೇಕಾದರೆ ಕರೆಯೋಣ. ಸ್ವತಸ್ಸಿದ್ಧವಾದ ಎಲ್ಲ ವಿಶ್ವ ನಿಯಮಗಳಿಗೆ ಸಾಮಾನ್ಯವಾದ ಗುಣವನ್ನು ಸತ್ಯ ಎಂದು ಕರೆಯಬಹುದು. ಒಂದು ಅಭಿವ್ಯಕ್ತಗೊಂಡ ವಿಶ್ವನಿಯಮಗಳ ಸಮಷ್ಟಿ ರೂಪ, ಇನ್ನೊಂದು ಅವುಗಳ ಸಾಮಾನ್ಯಗುಣ. ಸತ್ಯದ ಈ ಎರಡು ರೂಪಗಳ ಪೈಕಿ ಯಾವುದನ್ನು ಗಾಂಧೀಜಿ ಮೂಲಭೂತವೆಂದು ಪರಿಗಣಿಸಿದ್ದರೋ ಹೇಳುವುದು ಕಷ್ಟ. ಬಹುಶಃ ಇಂತಹ ರೂಪ ಭಿನ್ನತೆಯನ್ನೇ ಅವರು ಮಾನ್ಯ ಮಾಡುತ್ತಿರಲಿಲ್ಲವೇನೊ. ಅವರೇನು ತತ್ತ್ವಶಾಸ್ತ್ರದ ಪ್ರೊಫೆಸರೇ, ಇಂಥ ಸೂಕ್ಷ್ಮತೆಗಳನ್ನು, ಅವಶ್ಯಕವೆಂದು ಭಾವಿಸುವುದಕ್ಕೆ? ತತ್ತ್ವಶಾಸ್ತ್ರವೆಂದರೆ—ಕಡಿಮೆಯೆಂದರೆ ಕಡಿಮೆ ಸಂಖ್ಯೆಯ ಜನರಿಗೆ ಅಲ್ಪಾಲ್ಪವಾಗಿ ಪ್ರಯೋಜನಕ್ಕೆ ಬರುವಂಥ ಸಂಗತಿಗಳ ಬಗ್ಗೆ ಅಧಿಕಾಧಿಕವಾಗಿ ಮಾಡಲ್ಪಡುವ ಮೀಮಾಂಸೆ—ಎಂಬ ಮಾತಿದೆ. ಈ ಅರ್ಥದಲ್ಲಿ ಗಾಂಧೀಜಿ ತಾತ್ತ್ವಿಕರಲ್ಲ. ಆದರೆ ಯಾವನ ಚಿಂತನೆಗಳು ಸಮಕಾಲೀನ ಮಾನವ ಜನಾಂಗವನ್ನೇ ಪ್ರಭಾವಗೊಳಿಸಬಲ್ಲವೋ ಅಂಥವನು ತಾತ್ತ್ವಿಕನೆಂದಾದರೆ ಗಾಂಧೀಜಿ ಲೋಕದ ಅಪರೂಪದ ತಾತ್ತ್ವಿಕರ ಸಾಲಿನಲ್ಲಿ ನಿಲ್ಲಬಲ್ಲವರಾಗುತ್ತಾರೆ. ಅಂಥ ಪ್ರಭಾವಶಾಲಿ ಚಿಂತನೆಗಳು ಅವರ ಬರಹಗಳಲ್ಲಿ ದೊರಕುತ್ತವೆ:

'ದೇವರನ್ನು ನಾನು ವ್ಯಕ್ತಿಯಾಗಿ ಪರಿಭಾವಿಸುವುದಿಲ್ಲ. ನನಗೆ ಸತ್ಯವೇ ದೇವರು. ನೆಲವನ್ನಾಳುವ ರಾಜ ಮತ್ತು ಅವನ ಶಾಸನ

> ಇಂಗ್ಲೆಂಡಿನ ಮ್ಯಾಡಲಿನ್ ಸ್ಲೇಡ್ ಪ್ರಸಿದ್ಧ ಫ್ರೆಂಚ್ ಕಾದಂಬರಿಕಾರ ರೋಮಾ ರೋಲಾರನ್ನು ಸಂಧಿಸಿದಳು. ಅವರು ಏನೋ ಬರೆಯುತ್ತಿದ್ದರು. 'ಏನು ಬರೆಯುತ್ತಿರುವಿರಿ?' ಎಂದು ಕೇಳಿದಾಗ 'ಮಹಾತ್ಮಾ ಗಾಂಧೀ ಬಗ್ಗೆ ಬರೆಯುತ್ತಿದ್ದೇನೆ' ಎಂದರು ರೋಮಾ ರೋಲಾ. ಮ್ಯಾಡಲಿನ್ ಅಚ್ಚರಿ ವ್ಯಕ್ತಪಡಿಸಿದಳು. 'ಏನು, ಗಾಂಧೀ ಬಗ್ಗೆ ಕೇಳಿಲ್ಲವೆ?' ಎಂದು ಪ್ರಶ್ನಿಸಿದರು. 'ಇಲ್ಲ, ಯಾರವರು?' ಎಂದು ಕೇಳಿದಾಗ 'ಅವರು ಇನ್ನೊಬ್ಬ ಕ್ರಿಸ್ತ' ಎಂದರು ರೋಮಾ ರೋಲಾ. ಈ ಮಾತು ಆಕೆಯ ಹೃದಯವನ್ನು ಸ್ಪರ್ಶಿಸಿತು. ಮುಂದೆ ಮ್ಯಾಡಲಿನ್ ಸ್ಲೇಡ್ ಭಾರತಕ್ಕೆ ಬಂದು ಮಹಾತ್ಮಾ ಗಾಂಧೀಜಿಯವರ ಸಬರಮತಿ ಆಶ್ರಮವನ್ನು ಸೇರಿದಳು. ಆಕೆಯೇ ಮೀರಾ ಬೆಹನ್.

ಬೇರೆ ಬೇರೆ ಆಗಿರುವ ಹಾಗೆ ದೇವರು ಮತ್ತು ಅವನ ನಿಯಮ ಭಿನ್ನವಾದವುಗಳಲ್ಲ. ದೇವರೆಂದರೆ ಅವನ ನಿಯಮದ ಕಲ್ಪಿತ ಮೂರ್ತರೂಪ. ಆದ್ದರಿಂದ ತನ್ನ ನಿಯಮವನ್ನೇ ತಾನು ಮೀರುವ ದೇವರನ್ನು ಕಲ್ಪಿಸಲಾಗದು.

'ಸತ್ಯ ಎಂಬ ಪದವು ಸತ್ ಅಥವಾ ಇರುವಿಕೆ ಎಂಬುದರಿಂದ ಬಂದಿದೆ. ಸತ್ಯವಲ್ಲವಾಗಿರುವುದಕ್ಕೆ ಇರುವಿಕೆಯೇ ಇಲ್ಲ ಎಂದು ತಾನೆ ಇದರ ಅರ್ಥ? ಇದಕ್ಕಾಗಿಯೆ ಎಂದು ನನಗೆ ತೋರುತ್ತದೆ, ಸತ್ ಅಥವಾ ಸತ್ಯ ಎಂಬುದೇ ದೇವರ ಮುಖ್ಯವಾದ ಹೆಸರು. ದೇವರು ಸತ್ಯ ಎನ್ನುವುದಕ್ಕಿಂತ ಸತ್ಯವೇ ದೇವರು ಎಂಬುದೇ ಹೆಚ್ಚು ಸರಿ. "ನಿಯಾಮಕ"ರುಗಳಿಗೆ ಹೊಂದಿಕೊಂಡಿರುವ ನಮಗೆ ಸರ್ವಶಕ್ತ ಇತ್ಯಾದಿ ದೇವರ ಇತರ ಹೆಸರುಗಳೂ ಅಗತ್ಯವಾದರೂ, ಆಳವಾಗಿ ಯೋಚಿಸಿದಾಗ, ಸತ್ಯವೆಂಬುದೊಂದೇ ದೇವರ ಸರ್ವಶ್ರೇಷ್ಠ ಮತ್ತು ಅರ್ಥಪೂರ್ಣ ಹೆಸರು ಎಂದು ಗೊತ್ತಾಗುತ್ತದೆ.'

(*Selected Writings of Mahatma Gandhi*, Ed. Ronald Duncan).

ಈ ಮೇಲಿನ ಹೇಳಿಕೆಗಳ ಆಧಾರದ ಮೇಲೆ ಗಾಂಧೀಜಿಯ ಒಲವು ಸತ್ಯದ ಮೊದಲನೆಯ ರೂಪದ ಕಡೆಗೇ—ಎಂದರೆ ವಿಶ್ವನಿಯಮಗಳ ಸಮುಚ್ಚಯವೇ ಸತ್ಯ ಎಂಬುದರ ಕಡೆಗೇ—ಇದ್ದಿತೆಂದು ಹೇಳಬಹುದು.

**ಸತ್ಯವೇ ಅತ್ಯಂತ ಸಹಜವಾದುದು**

ಗಾಂಧೀಜಿಯವರಿಗೆ ಸತ್ಯವನ್ನೇ ಹೇಳುವುದರಲ್ಲಿ ಯಾವಾಗಲೂ ಯಾವ ಸಮಸ್ಯೆಯೂ ಉಂಟಾಗಲಿಲ್ಲ. ಎಲ್ಲರೂ ತಮ್ಮಷ್ಟೇ ಸಹಜವಾಗಿ ಸತ್ಯವನ್ನು ಆಶ್ರಯಿಸಬಹುದು, ಆಶ್ರಯಿಸಬಲ್ಲರು, ಆಶ್ರಯಿಸಬೇಕು ಎಂದೇ ಅವರು ನಂಬಿದ್ದರು. ಅವರ ಪ್ರಕಾರ ಸತ್ಯವೇ ದೇವರೆಂದಾದರೆ, ದೇವರು ಮಾನವನ ಪೂಜೆಗೆ, ಗೌರವಕ್ಕೆ ಅರಸುವಿಕೆಗೆ ಪಾತ್ರನಾದ್ದರಿಂದ ಈ ಆಶ್ರಯ ಸ್ವಾಭಾವಿಕವಾಗಿಯೆ ಸಾಧ್ಯ. ತಾನು ಹೀಗೆ ಸದಾ ಸತ್ಯವನ್ನು ಆಶ್ರಯಿಸಿಕೊಂಡಿರಬೇಕೆಂಬುದು ಅವರ ಹೆಬ್ಬಯಕೆಯಾಗಿತ್ತು. ಸಾಂಪ್ರದಾಯಿಕ ಹಿಂದೂಗಳ ನೈತಿಕ ತಳಹದಿಯಂತೆ ಸತ್ಯವು ಕೇವಲ ವಾಚ್ಯ ಮಾತ್ರವಾಗಿರಲಿಲ್ಲ; ಚಿಂತನೆಯಲ್ಲೂ ಕೃತಿಯಲ್ಲೂ ಹಾಸುಹೊಕ್ಕಾಗಿರಬೇಕಾಗಿತ್ತು. ಅಸಂಗತ ನಂಬಿಕೆಗಳನ್ನು ಪರಾಮರ್ಶೆಯಿಲ್ಲದೆ ಸ್ವೀಕರಿಸುವುದು ಅಸತ್ಯವನ್ನು ಸ್ವೀಕರಿಸಿದಂತೆಯೇ. ಸತ್ಯವು ಕೇವಲ ಇತರರೊಂದಿಗೆ ವ್ಯವಹರಿಸುವಾಗ ಇರಬೇಕಾದ ಗುಣ ಮಾತ್ರವಲ್ಲ, ತನ್ನೊಳಗೂ ತಾನು ಸತ್ಯವಂತನಾಗಿರಬೇಕು ಎಂದು ಗಾಂಧೀಜಿ ನಂಬಿದ್ದರು. ನಾವು ನಂಬಿದ ಸತ್ಯವು ನಮ್ಮ ಜೀವನದ ಎಲ್ಲಾ ಆಯಾಮಗಳಲ್ಲೂ ಪ್ರಕಾಶಕ್ಕೆ ಬರಬೇಕು, ನಮ್ಮನ್ನು ಮುನ್ನಡೆಸುವ ದೇವರಾಗಬೇಕು ಎನ್ನುತ್ತಿದ್ದರು.



## ಗಾಂಧೀಜಿಯವರು ಮತ್ತು ಅವರ ಆತ್ಮಸಾಕ್ಷಿ

ಗಾಂಧೀಜಿಯವರು ತಮ್ಮ ವಕೀಲಿ ವೃತ್ತಿಯನ್ನು ದಕ್ಷಿಣ ಆಫ್ರಿಕಾದಲ್ಲಿ ಪ್ರಾರಂಭಿಸಿದರು. ಅವರು ಡರ್ಬನ್‌ನಲ್ಲಿರುವಾಗ ಕೆಲವರು ಅವರ ಮನೆಗೆ ಬಂದು ತಮ್ಮ ಪರವಾಗಿ ನ್ಯಾಯಾಲಯದಲ್ಲಿ ವಾದಿಸಬೇಕೆಂದು ಕೇಳಿಕೊಂಡರು.

ಆಗ ಗಾಂಧೀಜಿಯವರು ಅವರುಗಳನ್ನು ಈ ರೀತಿ ಪ್ರಶ್ನಿಸಿದರು: 'ನೀವುಗಳು ಯಾರಿಗೂ ದ್ರೋಹ ಮಾಡಿಲ್ಲವೇ?'

ಆಗ ಅವರ ಪರವಾಗಿ ಒಬ್ಬಾತನು, 'ತಾವು ಮೇಲೆ ಹೇಳಿದ ಅಪರಾಧಗಳಲ್ಲಿ ಒಂದಲ್ಲಾ ಒಂದನ್ನು ನಾವು ಮಾಡಿದ್ದೇವೆ. ಆದರೆ ನೀವು ಬಹಳ ಬುದ್ಧಿವಂತರು, ನಾವುಗಳು ನಿರಪರಾಧಿಗಳೆಂದು ಸಾಧಿಸಬಲ್ಲಿರಿ ಎಂಬ ವಿಶ್ವಾಸದಿಂದ ನಿಮ್ಮ ಹತ್ತಿರ ಬಂದಿರುತ್ತೇವೆ' ಎಂದು ಹೇಳಿದರು.

ಆಗ ಗಾಂಧೀಜಿಯವರು 'ನಾನು ಸತ್ಯವನ್ನು ಸುಳ್ಳೆಂದೂ, ಸುಳ್ಳನ್ನು ಸತ್ಯವೆಂದೂ ವಾದಿಸಿ ಸಾಧಿಸುವಷ್ಟು ಬುದ್ಧಿವಂತನಲ್ಲ. ನನಗಿಂತಲೂ ಬುದ್ಧಿವಂತರುಗಳಿದ್ದಾರೆ. ಅವರುಗಳು ಕಪ್ಪನ್ನು ಬಿಳಿಯೆಂದೂ, ಬಿಳಿಯನ್ನು ಕಪ್ಪೆಂದೂ ಸಾಧಿಸಬಲ್ಲರು. ನಾನು ನನ್ನ ಮನಸ್ಸಾಕ್ಷಿಗೆ ವಿರೋಧವಾಗಿ ವಾದಿಸಲಾರೆ. ತಮಗೆ ನನ್ನಿಂದ ಯಾವ ಉಪಯೋಗವೂ ಆಗುವುದಿಲ್ಲವೆಂದು ವಿಷಾದಿಸುತ್ತೇನೆ' ಎಂದು ಹೇಳಿ ಅವರುಗಳನ್ನು ವಾಪಸ್ ಕಳುಹಿಸಿಬಿಟ್ಟರು.